ಶ್ರೀ ಎಂ. ಚಂದ್ರಶೇಕರ್.—ಸದ್ಯದಲ್ಲಿ ಇದು ಗ್ರಾಮೀಣ ರಸ್ತೆಯಾಗಿದೆ. ಮುಖ್ಯವಾಲೆ ಗುಲ್ಬರ್ಗ–ಚಿತ್ತಾಪುರ ಹಾಗೂ ಸೇಡಂ ಮಾರ್ಗವಾಗಿ ಈ ರಸ್ತೆಗೆ ಕಾಗಿನಿ ನದಿಗೆ ಸೇತುವೆ ಕಟ್ಟಿದಮೇಲೆ ಹೆಚ್ಚು ಪರಿಣಾಮಕಾರಿಯಾಗುತ್ತದೆ ಎಂದು ಸೂಚನೆ ಮಾಡುತ್ತಾ ಇದ್ದಾರೆ. ಅದನ್ನು ಇಲಾಖೆ ವತಿಯಿಂದ ಪರಿಶೀಲನೆಮಾಡಿ ಮೊದಲು ಅದನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಇಲಾಖೆಯವರು ಪರಿವರ್ತನೆ ಮಾಡಿಕೊಳ್ಳಬೇಕಾಗಿದೆ.

## ಯಾಂತ್ರಿಕ ದೋಣಿಗಳಿಗಾಗಿ ಶಿರೂರು ಬಂದರನ್ನು ಸುರಕ್ಷಿತಗೊಳಿಸುವುದು

೯೧೨ (೨೨೭೩) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಬಂದರು ಹಾಗು ಮೀನುಗಾರಿಕೆ ಮತ್ತು ಸಣ್ಣಕೈಗಾರಿಕೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಿರೂರಿನಲ್ಲಿ ಮೀನುಗಾರಿಕೆಗಾಗಿ ಯಾಂತ್ರಿಕ ದೋಣಿಗಳು ಬಹಳ ಸಂಖ್ಯೆಯಲ್ಲಿ ಬಂದರಿಗೆ ಬರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದರಿಗೆ ಬರುವ ದಾರಿಯಲ್ಲಿ ಸಮುದ್ರದೊಳಗೆ ಬಂಡೆ ಕಲ್ಲುಗಳಿದ್ದು ಅನೇಕ ದೋಣಿಗಳಿಗೆ ಧಕ್ಕೆ ಆಗಿರುವುದು ತಿಳಿದಿದೆಯೇ?

ಇ) ಆಳವಾಗಿರುವ ಮಾರ್ಗ ಗೋಚರವಾಗುವಂತೆ ಬೇರೆ ಬಂದರುಗಳಲ್ಲಿ ಮಾಡಿದಂತೆ ದೊಡ್ಡ ದೊಡ್ಡ ಕಲ್ಲುಗಳನ್ನು ಹಾಕಿ ತಡೆ ದಂಡೆ ರಚಿಸುವುದು ಸೂಕ್ತವಲ್ಲವೇ?

ಈ) ಈ ಕುರಿತು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ರಘುಪತಿ) ಒಳನಾಡು ಜಲಸಾರಿಗೆ, ಬಂದರು, ಸಣ್ಣಕೈಗಾರಿಕೆ ಮತ್ತು ಮೀನುಗಾರಿಕೆ ಸಚಿವರು).—

ಅ) ಹೌದು.

ಆ) ಬಂದರಿಗೆ ಬರುವ ದಾರಿಯಲ್ಲಿ ಬಂಡೆ ಕಲ್ಲುಗಳಿರುವುದರಿಂದ ದೋಣಿಗಳಿಗೆ ಧಕ್ಕೆ ಆಗುವ ಸಾಧ್ಯತೆ ಇದೆ.

ಇ) ಸಲಹೆಯು ಸೂಕ್ತವಾಗಿದೆ.

ಈ) ಕೇಂದ್ರಿಯ ಕರಾವಳಿ ಮೀನುಗಾರಿಕೆ ತಾಂತ್ರಿಕ ಸಂಸ್ಥೆಯ ನಿರ್ದೇಶಕರ ಸಲಹೆ ಪಡೆದು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಬಿ. ಎಂ. ಇದಿನಬ್ಬ (ಶ್ರೀ ಜಿ. ಆರ್. ಆಚಾರ್‌ರವರ ಪರವಾಗಿ).—ಮಾನ್ಯ ಸಚಿವರು ಸಲಹೆ ಸೂಕ್ತವಾಗಿದೆಯೆಂದು ಹೇಳಿದ್ದಾರೆ. ಶಿರೂರಿನಲ್ಲಿರುವ ಬಂದರಿನ ಜಾಗದಲ್ಲಿ ಬಂಡೆ ಕಲ್ಲುಗಳು ಇದ್ದು ದೋಣಿಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಈ ವಿಚಾರದಲ್ಲಿ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಂ ರಘುಪತಿ.—ಮಾನ್ಯ ಅಧ್ಯಕ್ಷರೆ, ಕೇಂದ್ರಿಯ ಕರಾವಳಿ ಮೀನುಗಾರಿಕೆ ತಾಂತ್ರಿಕ ಸಂಸ್ಥೆಗೆ ಬರೆಯಲಾಗಿದೆ. ಸೆಂಟ್ರಲ್ ಡೈರೆಕ್ಷನ್ ಪ್ರಕಾರ ಮೈನರ್ ಬಂದುಗಳನ್ನು ನಿರ್ಮಾಣ ಮಾಡ ಬೇಕಾದರೆ ಅವರ ಸಲಹೆಯನ್ನು ಪಡೆಯಬೇಕಾಗುತ್ತದೆ. ಅವರಿಂದ ಅನುಮತಿ ಬಂದಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ.

## ತಾಂತ್ರಿಕ ಶಿಕ್ಷಣ ಸಂಸ್ಥೆಯಲ್ಲಿ ಸೀಟುಗಳ ಮೀಸಲಾತಿ

೯೧೩(೨೭೮೮) ಶ್ರೀ ಬಿ. ಬಿ. ನಿಂಗಯ್ಯ (ಪುಲಿಕೇಶಿನಗರ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಸೀಟುಗಳನ್ನು ಹಂಚುವ ಸಂದರ್ಭದಲ್ಲಿ ಈಗಿರುವ ನಿಯಮಾವಳಿಗನುಗುಣವಾಗಿ (ಮೆರಿಟ್‌ಮೇಲೆ) ಸ್ಥಳೀಯ ಮತ್ತು ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಸೀಟು ದೊರೆಯುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?